ಬಿ.ಆರ್. ಉಷಾ, ಬೆಂಗಳೂರು

ಎಲ್ಲ ದೇವರ ಕೈಯಲ್ಲಿ ಆಯುಧವಿದ್ದರೆ ಕೃಷ್ಣನ ಕೈಯಲ್ಲಿ ಕೊಳಲು ಇದೆಯಲ್ಲಾ?



ಜನರನ್ನು ವ್ಯಕ್ತಿತ್ವ, ಸಂಗೀತದ ಮಾಧುರ್ಯದಿಂದಲೂ ಗೆಲ್ಲಬಹುದೆಂದು ತೋರಿಸಲು.

ಅನಸೂಯ ಟಿ, ಕೇದಿಗೆಮನೆ

ಕಡುಬಡವ, ಅತಿ ಶ್ರೀಮಂತರು ಮಧ್ಯಮವರ್ಗದವರಂತೆ ಮರ್ಯಾದೆಗೆ ಅಂಜುವುದಿಲ್ಲವೇಕೆ?

ಇಬ್ಬರೂ ಎಲ್ಲಿದ್ದರೂ, ಹೇಗಿದ್ದರೂ ಯಾರೂ ಮೂಗು ತೂರಿಸದಿರುವುದರಿಂದ.

ಸುರೇಶ್ ಬಿ.ವಿ. ಬೆಂಗಳೂರು

ಬರುವಾಗ ಬೆತ್ತಲೆ ನಿಜ. ಈಗೀಗ ಹೋಗುವಾಗ ಬೆತ್ತಲೆ ಇರುವುದಿಲ್ಲ ಅಲ್ಲವೆ?

ಬದುಕಿರುವಾಗಲೇ ರ್‍ಯಾಂಪಲ್ಲೋ, ವೈದ್ಯರ ಬಳಿಯೋ ಆಗಾಗ್ಗೆ ಬೆತ್ತಲಾಗುವುದರಿಂದ ಕಾಂಪೆನ್ಸೇಟ್ ಮಾಡಲಂತೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಸೆಲ್ಫಿಗೂ, ಶಿಲ್ಪಿಗೂ ವ್ಯತ್ಯಾಸವೇನು?



ಸೆಲ್ಫಿ ತೆಗೆದುಕೊಳ್ಳುವಾಗ ತುಟಿ ಅರಳುತ್ತದೆ; ಶಿಲ್ಪಿ ಹೊಡೆಯುವಾಗ ಗಲ್ಲ ಉಬ್ಬುತ್ತದೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಚಿನ್ನದ ಮೇಲಿನ ವ್ಯಾಮೋಹ ಮಹಿಳೆಯರಿಗೆ ಕಡಿಮೆಯಾಗಬೇಕಾದರೆ ಏನು ಮಾಡಬೇಕು?

ಪ್ಲಾಟಿನಮ್ಮಿನ ಮೇಲಿನ ವ್ಯಾಮೋಹ ಹೆಚ್ಚಿಸಿ.

ಮಂಡಿ ಕುಮಾರ್, ಬೆಂಗಳೂರು

ತುಂಬಿದ ಕೊಡ ಹೊತ್ತ ಮಹಿಳೆಯರ ಸೊಂಟಕ್ಕೂ, ನವತರುಣಿಯರ ಸೊಂಟಕ್ಕೂ ಇರುವ ವ್ಯತ್ಯಾಸವೇನು?

ಅವರದು ಬಳುಕು ಹೆಚ್ಚು; ಇವರದು ಉಳುಕು ಹೆಚ್ಚು.

ತಲಕಾಡು ಶ್ರೀನಿಧಿ, ಬೆಂಗಳೂರು

ನೆಮ್ಮದಿಯ ನಿದ್ರೆ ಬರಬೇಕೆಂದರೆ ದಿಂಬು ಎಷ್ಟು ಮುಖ್ಯ ರಾಮ್?

ನಿಶ್ಚಿಂತೆಯೆಂಬ ದಿಂಬು ಅತ್ಯವಶ್ಯ.

ಪಿ. ಜಯವಂತ ಪೈ, ಕುಂದಾಪುರ

ಮೈಸೂರಿನಲ್ಲೊಬ್ಬ ಆಸ್ತಿಗಾಗಿ ಶವದ ಕೈಯಿಂದ ಹೆಬ್ಬೆಟ್ಟು ಒತ್ತಿಸಿಕೊಂಡನಂತಲ್ಲ?

ವಿಷಯ ಬಹಿರಂಗವಾದ್ದರಿಂದ ಆ ಪತ್ರವೂ ಸತ್ತಿತಂತೆ.

ವಿ. ಹೇಮಂತಕುಮಾರ್, ಬೆಂಗಳೂರು

ಚಂದ್ರಮುಖಿಯರಂತೆ ಸೂರ್ಯಮುಖಿಯರೂ ಇರುವರೇ?

ಹೂಂ. ಚಂದ್ರಮುಖಿಗೆ ಕೈಕೊಟ್ಟರೆ ನಿಗಿನಿಗಿಸುವ ಸೂರ್ಯಮುಖಿ.

ಡಾ. ಚಂದನ್, ಬಾಳ್ಳುಪೇಟೆ

ಅತ್ಯಂತ ದೊಡ್ಡ ಸಾಧನೆ ಯಾವುದು?

ಸತ್ತ ಪ್ರಜೆಯಂತಲ್ಲದೆ ಸತ್ಪ್ರಜೆಯಂತೆ ಬಾಳುವುದು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಕಲೆ ಎಲ್ಲರಲ್ಲೂ ನೆಲೆಯಾದರೆ ಹೇಗಿರುತ್ತೆ ಸರ್?

ನೆಲೆಯಾಗಿರುತ್ತದಲ್ಲ. ಅದನ್ನೇ ಬರ್ತ್ ಮಾರ್ಕ್ ಎಂದು ಕರೆಯುವುದು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ನಮ್ಮ ಕನ್ನಡಪ್ರೀತಿ ಹೇಗಿರಬೇಕು?

ಗೌರವಮಿಶ್ರಿತವಾಗಿ. ಬರಿದೇ ಪ್ರೀತಿ ಸಲಿಗೆಗೆ ಎಡೆ ಮಾಡಿಕೊಟ್ಟು ಭಾಷೆ ಹಾಳಾಗುತ್ತದೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಹೆಂಡತಿ ಮುಟ್ಟಿದರೆ ಮುನಿ ಆದರೆ ಗಂಡ ಹೇಗಿರಬೇಕು?

ಓಹ್! ನಾಚಿ ಮುದುಡಿಕೊಳ್ಳುವಳೇನು? ಗಂಡ ನಾಚಿಕೆ ಬಿಡಿಸುವ ಕಲೆ ತಿಳಿಯಬೇಕು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಪಲ್ಲಕ್ಕಿಗೂ, ಪಲ್ಲಂಗಕ್ಕೂ ಏನು ವ್ಯತ್ಯಾಸ?

ಹೊತ್ತು ಹೋಗಲು ಪಲ್ಲಕ್ಕಿ. ಹೊತ್ತು ಹೋಗದಿದ್ದಾಗ ಪಲ್ಲಂಗ.

## ವಾರದ ಪ್ರಶ್ನೆ

ಪಿ.ಜೆ. ರಾಘವೇಂದ್ರ, ಮೈಸೂರು

ರಾಮಾಯಣ ಮಹಾಭಾರತಗಳಿಗಿಂತ ನಮ್ಮ ಕಿರುತೆರೆಯ ಧಾರಾವಾಹಿಗಳೇ ಮಹಾಕಾವ್ಯಗಳಾಗಿವೆಯಲ್ಲಾ...?

ನಿಜವೇ. ಇವನ್ನು ಮೀರಿದ **shutup** ಪದಿಗಳು, 'ಭೌ'ಮಿನಿಗಳು, ರಗಳೆಗಳು, ಶಾರ್ದೂಲವಿಕ್ರೀಡಿತಗಳು ವಿರಳ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

ವಕೀಲರಿಗೆ ಕಪ್ಪು ಕೋಟು, ವೈದ್ಯರಿಗೆ ಬಿಳಿಯ ಕೋಟೇ ಏಕೆ? ಬೇರೆ ಬಣ್ಣಗಳವು ಏಕಿಲ್ಲ?

ಎಲ್ಲರ ದೋಷಗಳನ್ನು ಹೀರಿಕೊಳ್ಳಲು ಕಪ್ಪು, ಎಲ್ಲ ವರ್ಣದವರಿಗೂ ಚಿಕಿತ್ಸೆ ಎನ್ನಲು ಬಿಳಿಯೇ ಸೂಕ್ತ ದ್ಯೋತಕವಂತೆ.

ಪಿ.ಜೆ. ರಾವ್, ಶಿವಮೊಗ್ಗ

ತುಲಾಭಾರ ಮಾಡಿಸುವ ಮುಖ್ಯ ಉದ್ದೇಶವೇನು?

ಅಕ್ಕಿಬೇಳೆ ಕೊಡುವಷ್ಟು ಹಗುರದವನೋ, ಬೆಳ್ಳಿ ಕೊಡುವಷ್ಟು ತೂಕದ ವ್ಯಕ್ತಿಯೋ ಎಂದು ನಿರ್ಧರಿಸಲು.

ಅಮರಯ್ಯಾ ಪತ್ರಿಮಠ, ಸುರಪುರ

ಕಳ್ಳ, ಪೊಲೀಸರಲ್ಲಿ ಬುದ್ಧಿವಂತ ಯಾರು?



ಪೊಲೀಸ್ ಬುದ್ಧಿವಂತ. ಕಳ್ಳ ಸೃಜನಶೀಲ.

ಎನ್. ಗೋಪಾಲರಾವ್, ಬೆಂಗಳೂರು

ಅರವತ್ತಕ್ಕೆ ಅರಳುಮರಳು ಆದರೆ ಎಪ್ಪತ್ತಕ್ಕೆ ಏನು?

ಒಪ್ಪತ್ತು.

ಆರ್. ಮಧುಸೂದನ್, ಹಾಸನ

ತನ್ನನ್ನು ಪಣಕ್ಕೆ ಇಟ್ಟಿದ್ದರಿಂದ ನೋವು, ಅವಮಾನವಾದರೂ ದ್ರೌಪದಿ ಪಾಂಡವರಿಗೇಕೆ ಡೈವೋರ್ಸ್ ಕೊಡಲಿಲ್ಲ?

ಜೀವನಾಂಶ ಕೊಡಲು ಅವರಲ್ಲಿ ಏನೂ ಇರಲಿಲ್ಲ!

■ ರಾಮ್

ನೀವೂ ಪ್ರಶ್ನೆ ಕಳಿಸಿ: **editorsu@sudha.co.in**